# ದಿವ್ಯಾನುರಾಗ



❁ ಭಗವಂತನನ್ನು ಪ್ರೀತಿಸುವುದು–ಇದೇ ಜೀವನದ ಉದ್ದೇಶ; ಬೃಂದಾವನದಲ್ಲಿ ಗೋಪ–ಗೋಪಿಯರು, ಗೋವಳಿಗರು ಶ್ರೀಕೃಷ್ಣನನ್ನು ಪ್ರೀತಿಸುತ್ತಿದ್ದ ಹಾಗೆ. ಕೃಷ್ಣ ಮಥುರೆಗೆ ಹೊರಟು ಹೋದನಂತರ ಗೋವಳಿಗರು ಆತನ ವಿರಹದಿಂದ ಅಳುತ್ತ ಅಳುತ್ತ ಸುಮ್ಮನೆ ಸುತ್ತಾಡುತ್ತಿದ್ದರು.

❁ ಭಗವಂತನಲ್ಲಿ ಅನುರಾಗ ಹುಟ್ಟಿಸುತ್ತದೆ; ಆತನನ್ನು ಪ್ರೀತಿಸುವಂತೆ ಮಾಡುತ್ತದೆ. ವ್ಯಾಕುಲತೆ ಉಂಟಾಗದಿದ್ದರೆ ಏನೂ ದೊರಕದು. ಸಾಧುಸಂಗ ಮಾಡುತ್ತ ಮಾಡುತ್ತ ಭಗವಂತನಿಗಾಗಿ ಪ್ರಾಣ ವ್ಯಾಕುಲಪಡಲಾರಂಭಿಸುತ್ತದೆ. ಮನೆಯಲ್ಲಿ ಯಾರಿಗಾದರೂ ಅಸೌಖ್ಯವಾದರೆ ಆತನನ್ನು ಗುಣಪಡಿಸುವುದು ಹೇಗೆ ಎಂಬುದಾಗಿ ಸರ್ವದಾ ಮನಸ್ಸು ವ್ಯಾಕುಲಪಡುತ್ತಾ ಇರುತ್ತದೆಯಲ್ಲಾ ಹಾಗೆ. ಕೆಲಸ ಕಳೆದುಕೊಂಡ ವ್ಯಕ್ತಿ ಯಾವ ರೀತಿ ವ್ಯಾಕುಲತೆಯಿಂದ ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಅಲೆಯುತ್ತಾ ಇರುತ್ತಾನೋ ಹಾಗೆ.

❁ ಭಗವಂತನಲ್ಲಿ ಅನುರಾಗ ಉಂಟಾಯಿತು ಎಂದರೆ, ಈ ಕರ್ಮಗಳ ವಿಷಯವಾಗಿ ಅತಿಯಾಗೇನು ತಲೆಗೆ ಹಚ್ಚಿಕೊಳ್ಳಬೇಕಾಗಿಲ್ಲ. ಗಾಳಿ ಬೀಸದವರೆಗೆ ಮಾತ್ರವೇ ಬೀಸಣಿಗೆಯ ಆವಶ್ಯಕತೆ. ತಂಗಾಳಿ ಬೀಸಲಾರಂಭಿಸಿತು ಎಂದರೆ ಬೀಸಣಿಗೆಯನ್ನು ಕೆಳಕ್ಕೆ ಇಟ್ಟುಬಿಡಬಹುದು, ಬಳಿಕ ಬೀಸಣಿಗೆಯ ಆವಶ್ಯಕತೆಯೇನಿದೆ?

❁ ಭಗವಂತನಲ್ಲಿ ನಿನಗೆ ಭಕ್ತಿಪ್ರೇಮ ದೊರೆತಷ್ಟೂ ನಿನ್ನ ಕರ್ಮ ಕಡಿಮೆ ಕಡಿಮೆಯಾಗುತ್ತಾ ಬಂದುಬಿಡುತ್ತದೆ. ಸೊಸೆ ಗರ್ಭಿಣಿಯಾದರೆ ಅತ್ತೆ ಆಕೆಯ ಕೆಲಸವನ್ನು ಕಡಿಮೆ ಮಾಡಿಕೊಡುತ್ತಾಳೆ. ತಿಂಗಳು ಆದಷ್ಟೂ ಆಕೆಯ ಪಾಲಿನ ಕೆಲಸ ಕಡಿಮೆ ಕಡಿಮೆಯಾಗುತ್ತಾ ಹೋಗುತ್ತದೆ. ಒಂಭತ್ತು ತಿಂಗಳು ತುಂಬಿತು ಎಂದರೆ, ಹೊಟ್ಟೆಯಲ್ಲಿ ಮಗುವಿಗೆ ಏನಾದರೂ ಅಪಾಯ ಸಂಭವಿಸಬಹುದೊ, ಹೆರಿಗೆ ಸಮಯದಲ್ಲಿ ಏನಾದರೂ ತೊಂದರೆಯಾಗಬಹುದೊ ಏನೊ ಎಂದು ಹೆದರಿ ಆಕೆಯ ಕೈಯಲ್ಲಿ ಯಾವ ಕೆಲಸವನ್ನೂ ಮಾಡಿಸುವುದೇ ಇಲ್ಲ.

❁ ಭಕ್ತಿಯೇ ಮುಖ್ಯವಾದ್ದು. ಭಗವಂತನೇನೊ ಎಲ್ಲಾ ಭೂತಗಳಲ್ಲಿಯೂ ಇದ್ದಾನೆ. ಇದರಲ್ಲಿ ಸಂದೇಹವೇನಿಲ್ಲ. ಆದರೆ ಭಕ್ತ ಯಾರು ಅಂತೀಯೊ? ಯಾರ ಮನಸ್ಸು ಸರ್ವದಾ ಭಗವಂತನಲ್ಲಿಯೇ ರತವಾಗಿದೆಯೋ ಆತ. ಅಹಂಕಾರ, ಅಭಿಮಾನ ಇರುವವರೆಗೆ ಮನಸ್ಸು ಹಾಗೆ ಮಾಡಲಾರದು. 'ಅಹಂ' ರೂಪದ ದಿಣ್ಣೆ ಮೇಲೆ ಭಗವಂತನ ಕೃಪಾರೂಪದ ನೀರು ಶೇಖರವಾಗದು. ಅದು ಕೆಳಕ್ಕೆ ಹರಿದು ಬಂದುಬಿಡುತ್ತದೆ.

❁ ಅಂತರ್ಯದಲ್ಲಿ ವ್ಯಾಕುಲತೆ ಇದ್ದರೇ ಯಥೇಷ್ಟ. ಭಗವಂತನಲ್ಲಿ ಪ್ರೀತಿ ಇದ್ದರೇ ಸಾಕು. ಆತ ಅಂತರ್ಯಾಮಿ. ನಮ್ಮ ಅಂತರ್ಯದಲ್ಲಿರುವ ಪ್ರೀತಿ ವ್ಯಾಕುಲತೆ ಏನು ಎಂಬುದನ್ನು ಆತ ಅರಿತುಕೊಳ್ಳಬಲ್ಲ. ಉದಾಹರಣೆಗೆ ಒಬ್ಬನಿಗೆ ಅನೇಕ ಮಕ್ಕಳು ಅಂತ ಇಟ್ಟುಕೊಳ್ಳಿ. ದೊಡ್ಡ ಮಕ್ಕಳು ಆತನನ್ನು ಸ್ಪಷ್ಟವಾಗಿ 'ಅಪ್ಪ' 'ಅಯ್ಯ' ಎಂಬುದಾಗಿ ಕರೆಯುತ್ತವೆ. ಆದರೆ ಎಳೆಯ ಮಕ್ಕಳು ಅತಿ ಹೆಚ್ಚೆಂದರೆ 'ಪಾ,' 'ಯಾ' ಎಂಬುದಾಗಿ ಕರೆಯಬಲ್ಲುವು. ಈ ರೀತಿ ಅಸ್ಪಷ್ಟವಾಗಿ ಮಾತನಾಡುವ ಮಕ್ಕಳ ಮೇಲೆ ತಂದೆ ಕೋಪಿಸಿಕೊಳ್ಳುತ್ತಾನೇನು? ತಂದೆಗೂ ಗೊತ್ತಿದೆ, ಅವೂ ತನ್ನನ್ನೇ ಕರೆಯುತ್ತಿವೆ, ಆದರೆ ಅವಕ್ಕೆ ತನ್ನ ಹೆಸರನ್ನು ಸ್ಪಷ್ಟವಾಗಿ ಉಚ್ಚರಿಸಲು ಸಾಧ್ಯವಾಗುತ್ತಿಲ್ಲ ಎಂಬುದಾಗಿ. ತಂದೆಗೆ ಎಲ್ಲಾ ಮಕ್ಕಳೂ ಒಂದೇ ಸಮ. ಹಾಗೆಯೇ ಭಕ್ತರೂ ಆತನನ್ನೇ ಕರೆಯುತ್ತಾರೆ, ಆದರೆ ವಿವಿಧ ಹೆಸರುಗಳಿಂದ. ಎಲ್ಲರೂ ಆ ಒಬ್ಬನನ್ನೇ ಕರೆಯುತ್ತಿರುವುದು. ಭಗವಂತ ಒಬ್ಬನೇ, ಆದರೆ ಆತನಿಗೆ ಹೆಸರು ಮಾತ್ರ ಅನೇಕ.

❁ ಭಗವಂತನಲ್ಲಿ ಶುದ್ಧ ಭಕ್ತಿ ಗಳಿಸಿಕೊಳ್ಳದೆ ಇದ್ದರೆ, ಮುಕ್ತಿ ದೊರಕುವ ಹಾಗೇ ಇಲ್ಲ. ಭಗವಂತನ ಸಾಕ್ಷಾತ್ಕಾರ ಪಡೆದು ಸಂಸಾರದಲ್ಲಿದ್ದರೆ ಹೆದರಿಕೊಳ್ಳಬೇಕಾಗಿಲ್ಲ. ಆಗಾಗ ನಿರ್ಜನ ಪ್ರದೇಶದಲ್ಲಿದ್ದು ಸಾಧನೆ ಮಾಡಿ ಶುದ್ಧ ಭಕ್ತಿ ಗಳಿಸಿಕೊಂಡಿದ್ದೇ ಆದರೆ, ಸಂಸಾರದಲ್ಲಿದ್ದರೂ ಹೆದರಿಕೊಳ್ಳಬೇಕಾಗಿಲ್ಲ. ಚೈತನ್ಯದೇವನಿಗೆ ಸಂಸಾರಸ್ಥ ಭಕ್ತರೂ ಇದ್ದರು. ಅವರು ಸಂಸಾರದಲ್ಲಿ ಹೆಸರಿಗೆ ಮಾತ್ರ ಇರುತ್ತಿದ್ದರು, ಅನಾಸಕ್ತರಾಗಿ ಇರುತ್ತಿದ್ದರು.

❁ ವ್ಯಾಕುಲನಾಗಿ ಆತನ ದರ್ಶನಕ್ಕಾಗಿ ಅಳಬಲ್ಲೆಯಾ? ಜನ ಮಕ್ಕಳಿಗಾಗಿ, ಹೆಂಡತಿಗಾಗಿ, ಹಣಕ್ಕಾಗಿ ಬಿಂದಿಗೆ ತುಂಬ ಕಣ್ಣೀರು ಸುರಿಸುತ್ತಾರೆ. ಆದರೆ ಭಗವಂತನಿಗಾಗಿ ಯಾರು ಅಳುತ್ತಾರೆ? ಮಗು ಗಿಲಿಕೆಯಲ್ಲೇ ಮಗ್ನವಾಗಿ ತಾಯಿಯನ್ನು ಮರೆತಿರುವಾಗ ಆಕೆ ಅಡಿಗೆ ಮತ್ತು ಉಳಿದ ಮನೆಕೆಲಸ ಇವನ್ನೆಲ್ಲಾ ಮಾಡುತ್ತಿರುತ್ತಾಳೆ. ಯಾವಾಗ ಮಗುವಿಗೆ ಗಿಲಿಕೆ, ಉರುಟುಗೋಲು ಯಾವುದೂ ಬೇಡವಾಗಿ, ಅವನ್ನು ಬಿಸಾಡಿ ಚೀತ್ಕಾರಮಾಡುತ್ತ ಅಳಲಾರಂಭಿಸುವುದೊ, ಆಗ ತಾಯಿ ಅನ್ನದ ತಪ್ಪಲೆ ಕೆಳಗಿಳಿಸಿ ಓಡಿ ಓಡಿ ಬಂದು ಮಗುವನ್ನು ಕಂಕುಳಿಗೆ ಹಾಕಿಕೊಳ್ಳುತ್ತಾಳೆ.

ಶ್ರೀರಾಮಕೃಷ್ಣ ವಚನವೇದದಿಂದ